ಕರ್ನಾಟಕ ವಿಧಾನ ಸಭೆ

ಶುಕ್ರವಾರ 16ನೇ ಜನವರಿ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-50 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ನವರು

ಪೀಠವನ್ನು ಅಲಂಕರಿಸಿದ್ದರು

1) ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

ಅಧ್ಯಕ್ಷರು : ಮಾನ್ಯ ಶ್ರೀನಿವಾಸಗೌಡರೇ, ಈಗ ಸ್ವಲ್ಪ ಪರಿಸ್ಥಿತಿ ಚೇಂಜ್ ಆಗಿದೆ. ಅಂದರೆ ನಮ್ಮ ಅಧಿಕೃತ ವಿರೋಧಿ ಪಕ್ಷದ ಸದಸ್ಯರೆಲ್ಲರೂ ಸದನಕ್ಕೆ ಬಂದಿದ್ದಾರೆ. ಅವರೂ ಮಾತನಾಡಲು ಸಮಯ ಬೇಕು ಎಂದು ಕೇಳಿಕೊಂಡಿದ್ದಾರೆ. ಈಗ ನಿಮ್ಮ ಕಡೆಯಿಂದ ಶ್ರೀ ಎಸ್.ಎಸ್. ಪಾಟೀಲರು ಸುಮಾರು 1-45 ಘಂಟೆಗಳಷ್ಟು ಮಾತನಾಡಿದ್ದಾರೆ. ಸರಕಾರದವರು ಇವೊತ್ತು ನೈಟ್ ಒಳಗೆ at any cost it should be over ಎಂದು ಹೇಳಿದ್ದಾರೆ. ಆದ್ದರಿಂದ ತಾವುಗಳು ಮಾತನಾಡುವಾಗ ಟೈಮ್ ರಿಸ್ಟ್ರಿಕ್ಟ್ ಮಾಡಿಕೊಂಡರೆ ಸರಿ ಹೋಗುತ್ತದೆ. ನನಗೆ ಅಷ್ಟೇ ಬೇಕಾದುದು.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಇನ್ನೊಂದು ಸಲಹೆ ಬಂದಿದೆ. ಇವೊತ್ತಿಗೆ ತಾವುಗಳು ಸದನವನ್ನು ಎಕ್ಸ್‌ಟೆಂಡ್ ಮಾಡಿದ್ದಕ್ಕೆ ಧನ್ಯವಾದಗಳು. ಮಾನ್ಯ ಮುಖ್ಯಮಂತ್ರಿಯವರು ಈ ಕುರಿತು ಸ್ವಲ್ಪ ಉದಾರತೆ ತೋರಿದ್ದಾರೆ. ಆವೊತ್ತಿನ ಪರಿಸ್ಥಿತಿಯಲ್ಲಿ ಬಿಜೆಪಿಯವರು ಸದನಕ್ಕೆ ಬರುವುದಿಲ್ಲ. ಬೈಕಾಟ್ ಮಾಡಿದ್ದಾರೆ ಎಂದು ಇತ್ತು. ಇವೊತ್ತು ಅವರೂ ಸಹ ಸದನಕ್ಕೆ ಬಂದಿದ್ದಾರೆ. ಹೇಗಿದ್ದರೂ ಮುಖ್ಯಮಂತ್ರಿಯವರ ಬದಲಾಗಿ ತಾವೇ ಉತ್ತರ ಕೊಡುತ್ತಾ ಇದ್ದೀರಿ. ಮೊನ್ನೆ ಎಸ್.ಎಸ್. ಪಾಟೀಲರವರು ಒಂದೇ ದಿನ ಎಂದು ತಿಳಿದುಕೊಂಡು ಸ್ವಲ್ಪ ಜಾಸ್ತಿ ಮಾತನಾಡಿದ್ದಾರೆ. ಇವೊತ್ತು ನಾನು ಮಾತನಾಡಬೇಕು, ಇವರೂ ಮಾತನಾಡಬೇಕು, ನಮ್ಮ ಪಕ್ಷದವರೂ ಮಾತನಾಡಬೇಕು. ಅವರೂ ಕೂಡ ಮಾತನಾಡಬೇಕು. ಹೀಗಾಗಿ ಇವೊತ್ತು ಒಂದೇ ದಿನ ಸಾಕಾಗುವುದಿಲ್ಲವೆಂದು ಕಾಣುತ್ತದೆ. ನಾಳೆ ರಿಪ್ಲೈ ಕೊಟ್ಟರೆ ಚೆನ್ನಾಗಿರುತ್ತಿತ್ತು. ಹಾಗೆ ಮಾಡಿದರೆ ಎಲ್ಲರೂ ಚರ್ಚೆಯಲ್ಲಿ ಭಾಗವಹಿಸಲು ಅನುಕೂಲವಾಗುತ್ತದೆಂದು ಭಾವಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಶ್ರೀನಿವಾಸಗೌಡರು ಪ್ರಾರಂಭ ಮಾಡಲಿ. ತಾವುಗಳು ಹೇಳಿದ ವಿಚಾರವನ್ನು ನಾವು ಕುಳಿತುಕೊಂಡು ವಿಚಾರ ಮಾಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಪ್ರತಿಪಕ್ಷದ ನಾಯಕರು ಮತ್ತು ಗೌರವಾನ್ವಿತ ಸದಸ್ಯರುಗಳು ಸದನಕ್ಕೆ ಬಂದಿದ್ದಾರೆ. ಅವರನ್ನು ಸರಕಾರದ ವತಿಯಿಂದ ಸ್ವಾಗತಿಸುತ್ತೇನೆ. ಅವರುಗಳು ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಾನೂ ಕೂಡ ಅವರನ್ನು ಸ್ವಾಗತಿಸುತ್ತೇನೆ. ಅದು ನನ್ನ ಕರ್ತವ್ಯ ಕೂಡ ಆಗಿದೆ. ಅವರುಗಳು ಮುಂದೆ ಈ ರೀತಿಯಾಗಿ ಆಗದಿರುವಂತೆ ಮಾಡಿಕೊಂಡಿರಲಿ ಎಂದು ಕೇಳಿಕೊಳ್ಳುತ್ತೇನೆ.

ನನಗೆ ಅಷ್ಟೇ ಬೇಕಾಗಿರುವುದು. ನಾನು ಈಗಾಗಲೇ ಹೇಳಿದ ಹಾಗೆ ಟೈಮಿಂಗ್ಸ್‌ನ್ನು ಚೇಂಬರ್‌ನಲ್ಲಿ ಕುಳಿತು ನಿರ್ಧರಿಸುತ್ತೇವೆ. ಹೆಚ್ಚು ಅಂದರೆ ಮಾನ್ಯ ಶ್ರೀನಿವಾಸಗೌಡರು ಅರ್ಧ ಗಂಟೆಯೊಳಗಾಗಿ ಮುಗಿಸಬೇಕು. ಗೌಡರು ನಾಲ್ಕು ಘಂಟೆಗಳ ಕಾಲ ಮಾತನಾಡುವ ಶಕ್ತಿಯನ್ನು ಹೊಂದಿದ್ದಾರೆಂದು ನನಗೂ ಗೊತ್ತಿದೆ. ಆದರೆ ಸಮಯಾವಕಾಶ ಹೆಚ್ಚು ಇಲ್ಲದಿರುವುದರಿಂದ ಅದನ್ನು ರಿಸ್ಟ್ರಿಕ್ಟ್ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ತಮ್ಮ ಭಾಷಣವು 68 ಪುಟಗಳು ಇವೆ. 68 ಪುಟಕ್ಕೆ ಒಂದೊಂದು ನಿಮಿಷವೆಂದರೂ ಒಂದು ಘಂಟೆಯಾಗುತ್ತದೆ. ನೀವು ಅರ್ಧಘಂಟೆಯಲ್ಲಿ ಮಾತನಾಡಿ ಎಂದರೆ ಹೇಗೆ ಸಾಧ್ಯವಾಗುತ್ತದೆ? ತೆನ್ನಾಲಿ ರಾಮಕೃಷ್ಣ ಬಿಸಿ ಹಾಲು ಇಟ್ಟ ಹಾಗೆ ಇಟ್ಟು ನೀವು ಮಾತನಾಡಿ ಎಂದರೆ ಹೇಗೆ? ಅದನ್ನು ಕುಡಿಯುವ ಹಾಗೆ ಇಲ್ಲ. ಬಿಡುವ ಹಾಗೆ ಇಲ್ಲ.

ಅಧ್ಯಕ್ಷರು : ಅದಕ್ಕೋಸ್ಕರವೇ ಐದು ದಿವಸಗಳನ್ನು ಇಟ್ಟಿದ್ದೆವು. ನಿಮಗೆ ಮಾತನಾಡಬೇಡಿ ಎಂದು ನಾವೇನಾದರೂ ಹೇಳಿದ್ದೇವೋ? ನಾವು ಈಗ ಫ್ಲೋರ್ ಲೀಡರ್ಸ್‌ನ್ನು ಕರೆಸಿ ಚರ್ಚೆ ಮಾಡುತ್ತೇವೆ. ಅಲ್ಲಿ ಆದ ಡಿಸಿಶನ್‌ನ್ನು ನಾನು ಹೇಳುತ್ತೇನೆ. ಅದರ ಪ್ರಕಾರ ನಡೆದುಕೊಳ್ಳಿ. ಇನ್ನೊಂದು ವಿಚಾರವೆಂದರೆ, ಸುಮ್ಮನೆ ಮಾತನಾಡುವಾಗ ಬೇರೆ ಸದಸ್ಯರ ಕಡೆಗೆ ಕೈ ತೋರಿಸಿ, ಹೀಗಲ್ಲವೇ, ಹಾಗಲ್ಲವೇ ಎಂದು ಪ್ರಶ್ನೆ ಕೇಳುವುದು ಬೇಡ.

ಶ್ರೀ ಡಿ.ಬಿ. ಸದಾನಂದ ಗೌಡ : ಇವೊತ್ತು ಅಷ್ಟು ಕೈ ತೋರಿಸುವುದಕ್ಕೆ ಜನರು ಇಲ್ಲ. ಹಾಗಾಗಿ ಅಂಥ ಸಂಗತಿಗಳು ಆಗಲಿಕ್ಕಿಲ್ಲ. ಗೌಡರಿಗೆ ಅಂಥ ಸಂದರ್ಭಗಳು ಸಿಗಲಿಕ್ಕಿಲ್ಲವೆಂಬುದು ನನ್ನ ಅಭಿಪ್ರಾಯ.

† ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ (ಕೋಲಾರ) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಸರಕಾರ ಮಂಡಿಸಿದ ಬಳಿಕ ನಮ್ಮ ಬಿಜೆಪಿ ಪಕ್ಷದವರು ಸ್ಟೈಕ್ ಮಾಡದೇ ಇದ್ದಿದ್ದರೆ, ಇವೊತ್ತಿನ ಸಮಸ್ಯೆಗಳು ಬಹಳಷ್ಟು ಕಡಿಮೆಯಾಗುತ್ತಿದ್ದವು.

ಶ್ರೀ ಆರಗ ಜ್ಞಾನೇಂದ್ರ : ನಾವು ಸ್ಟೈಕ್ ಮಾಡಿದ್ದಲ್ಲ, ನಮ್ಮನ್ನು ಎತ್ತಿ ಹೊರಗೆ ಹಾಕಿದ್ದರು. ನಾವು ಶಾಸನಸಭೆಯಲ್ಲಿ ಇರಬಾರದು ಎಂದು.

Mr. Speaker : No... No... I am very sorry. ನಾನು ನಿಮ್ಮನ್ನು ಎಷ್ಟು ಸಲ ಕೇಳಿಕೊಂಡಿದ್ದೇನೆ. ಎಷ್ಟು ಸಮಯ ಕೊಟ್ಟಿದ್ದೇವೆ... ಅದನ್ನು ಬಿಟ್ಟು ನೀವೇ ಎತ್ತಿ ಹಾಕಿಸಿಕೊಂಡರೆ ನಾನೇನು ಮಾಡುವುದು? ನಿಮ್ಮನ್ನು ಎತ್ತಿ ಹಾಕಿಸುವುದಕ್ಕೆ ನನಗೇನು ಗ್ರಹಚಾರವೇ, ನಿಮ್ಮನ್ನು ಎತ್ತಿಹಾಕಿಸಲು?

ಶ್ರೀ ಶ್ರೀನಿವಾಸಗೌಡ (ಕುದುವನಹಳ್ಳಿ) : ಬಿಜೆಪಿಯವರು ಇವೊತ್ತು ಬರ ಮತ್ತು ಕುಡಿಯುವ ನೀರಿನ ಸಮಸ್ಯೆಗಳು ಇದ್ದರೂ ಕೂಡ ಚುನಾವಣೆಗಳು ಹತ್ತಿರ ಬಂದಿರುವುದರಿಂದ ... ಮಾನ್ಯ ಅಧ್ಯಕ್ಷರೆ, "ಹರೇ ರಾಮ ಹರೇ ಕೃಷ್ಣ" ... ಎಂದು ದೇವಾನಂದರವರದ್ದು ಒಂದು ಸಿನೇಮಾ ಬಂದಿತ್ತು ಆದರೆ ಇವರು ನಾಳಿನ ಚುನಾವಣೆಯಲ್ಲಿ ಹರೇ ಕರೀಂಲಾಲ್ ... ಹರೇ ರೋಷನ್‌ಬೇಗ್ .... ಎಂದು ಹೇಳಿಕೊಂಡು ಹೋಗುವುದಕ್ಕೆ ಇವರು ನಮ್ಮ ವಿಧಾನಸಭೆಯ ಕಲಾಪಗಳನ್ನು ನಡೆಯುವುದಕ್ಕೆ ಬಿಡದೆ ನಾಲ್ಕೈದು ದಿವಸಗಳ ಕಾಲ ಬಾವಿಯಲ್ಲಿ ಬಿದ್ದರು.

ಶ್ರೀ ಡಿ.ವಿ. ಸದಾನಂದಗೌಡ : ನಾವು ಇಷ್ಟು ದೊಡ್ಡ ಒಂದು ಸ್ಕ್ಯಾಮ್‌ನ ಬಗ್ಗೆ, ಜ್ವಲಂತ ಸಮಸ್ಯೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ಆದರೆ ಇವರಿಗೆ ಹೆದರಿಕೆ–ಯಾಕೆ? ಇವರ ಹಿಂದೆ ಇದ್ದವರ ಯಾರದ್ದಾದರೂ ಹೆಸರು ಹೊರಗೆ ಬಂದು ಬಿಡುತ್ತದೋ ಎಂಬ ಹೆದರಿಕೆ ಇರಬಹುದು.

(ಗೊಂದಲ)

ಶ್ರೀ ಶ್ರೀನಿವಾಸಗೌಡ (ಕುದುವನಹಳ್ಳಿ) : ಭಾಪಾ ಕಾಗದ ಹಗರಣದ ವಿಷಯದಲ್ಲಿ ಎರಡು ಮಾತಿಲ್ಲ. ಆದರೆ ಇವರು ಚುನಾವಣೆಯೊಂದನ್ನೇ ತಲೆಯಲ್ಲಿಟ್ಟುಕೊಂಡು ಶ್ರೀರಾಮಚಂದ್ರರನ್ನು ಪೋಲಿಂಗ್ ಏಜೆಂಟ್ ಆಗಿಟ್ಟುಕೊಳ್ಳುವ ಹುನ್ನಾರ ಬಿಟ್ಟರೆ, ಇನ್ನೇನು? ಸಮಸ್ಯೆಯಾಯಿತು, ಸರಕಾರದವರು ಉತ್ತರ ಕೊಟ್ಟರು. ಅದರ ಮೇಲೆ ನೀವು ಒಂದು ದಿನ ಧರಣಿ ಮಾಡಿದ್ದೀರಿ. ಅದೇ ರೀತಿಯಲ್ಲಿ ವಿಧಾನ ಪರಿಷತ್ತಿನಲ್ಲಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅನುವು ಮಾಡಿಕೊಡುತ್ತಾರೆ. ಆದರೆ ಇಲ್ಲಿ ನಿಮ್ಮ ನಿಮ್ಮಲ್ಲಿಯೇ ಏಕೆ ವ್ಯತ್ಯಾಸ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಇವರದ್ದು ಜಾಸ್ತಿಯಾಯಿತು. ನಾವೆಲ್ಲರೂ ಹರೇ ಕರೀಂ ಲಾಲ್ ಎಂದು ಹೇಳಿಕೊಂಡು ಹೋಗುತ್ತೇವೆ ಎಂದು ಹೇಳುತ್ತಿದ್ದಾರೆ. ಇವರದ್ದೇನು? ಹತ್ತಿರ ಹತ್ತಿರ ಬಾ... ಎಂದು ಹೇಳಿಕೊಂಡು ದೂರ ಸರಿದರು.. ಎಂದು ಹೇಳಿಕೊಂಡು ಹೋಗುತ್ತಾರೋ ಇವರು?

ಅಧ್ಯಕ್ಷರು : ಪ್ರಾರಂಭದಲ್ಲೇ ನೀವು ಕಾಂಟ್ರವರ್ಷಿಯಲ್ ಶುರು ಮಾಡಿದಿರಿ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದೆಲ್ಲಾ ಇದೆಯೆ?

ಶ್ರೀ ಶ್ರೀನಿವಾಸಗೌಡ (ಕುದುವನಹಳ್ಳಿ) : ಹೀಗೆ ಮಾತನಾಡಿದರೆ ಅರ್ಧ ಗಂಟೆಯಲ್ಲಿ ಆಗುವುದೇ ಇಲ್ಲ. ನಾನು ಅವರಿಗೆ ಹೇಳಿದ್ದು ಏನು ಅಂದರೆ ಇಂಥ ಸಮಸ್ಯೆಗಳಿರುವಾಗ ವಿಧಾನಪರಿಷತ್ತಿನಲ್ಲಿ ಅವರ ಪಕ್ಷದವರೇ ಮಾತನಾಡುವಾಗ ಇಲ್ಲಿ ಏಕೆ ಮಾತನಾಡಲಿಲ್ಲ ಅನ್ನುವುದಕ್ಕೆ ನಾನು ಆ ಉದಾಹರಣೆ ಕೊಟ್ಟೆ.

ಶ್ರೀ ಡಿ.ಬಿ. ಚಂದ್ರೇಗೌಡ : ನನ್ನಿಂದ ಲೋಪವಾಗಬಾರದು, ಮಾನ್ಯ ವಿರೋಧ ಪಕ್ಷದ ನಾಯಕರು ಸಭೆಗೆ ಬಂದಿರುವುದು ನಮಗೆಲ್ಲಾ ತುಂಬ ಸಂತೋಷವಾಗಿದೆ. ಆತ್ಮೀಯವಾಗಿ ಅವರನ್ನು ಅವರ ಪಕ್ಷದವರನ್ನು ಈ ಸಭೆಗೆ ಸ್ವಾಗತಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಚಂದ್ರೇಗೌಡರೇನು ಕೆಲವೊಂದು ಸದಭಿಪ್ರಾಯ ಹೇಳಿದರು ನಾನೂ ಅದಕ್ಕೆ ಸ್ಪಂದನ ಮಾಡುತ್ತೇನೆ. ಇನ್ನೂ ಹಲವಾರು ಜ್ವಲಂತ ಸಮಸ್ಯೆಗಳ ಬಗ್ಗೆ ನಮಗೂ ಇಲ್ಲಿ ಚರ್ಚೆ ಮಾಡುವುದು ಇದೆ. ಅದಕ್ಕಾಗಿ ಸರ್ಕಾರವೇನು ಸಹಕಾರ ಕೊಟ್ಟಿದೆ ಅದಕ್ಕಾಗಿ ನಾನೂ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮತ್ತೆ ಆ ಸಮಸ್ಯೆಯನ್ನು ನಾವು ಬಂಡೆ ಮೇಲೆ ಕುಟ್ಟಿಕುಟ್ಟಿ ಗುದ್ದಾಡಿದ ಹಾಗೆ ಆಗಿದೆ. ಮತ್ತೇನೂ ಪ್ರಯೋಜನವಿಲ್ಲ. ನಾವು ಜನರ ಹತ್ತಿರ ಹೋಗುತ್ತೇವೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ಚರ್ಚೆ ಆಗಬಾರದು ಎಂದು ಒಡಂಬಡಿಕೆ, ಅವರಿಗೆ ಇತ್ತೋ ಏನೋ, ಅಥವಾ ಇವರಿಗೆ ಒಂದು ಇಶ್ಯೂ ಬೇಕಾಗಿತ್ತೇನೋ ಎಂಬ ಒಡಂಬಡಿಕೆ ಏನಾದರು ಆಗಿತ್ತಾ ಎಂದು.

ಶ್ರೀ ಡಿ.ಬಿ. ಚಂದ್ರೇಗೌಡ : ಅದರಲ್ಲಿ ಅನುಮಾನವೇ ಇಲ್ಲ. ಒಡಂಬಡಿಕೆಯಾಗಿದೆ. ಏನು ಅಂದರೆ ಸದನದಲ್ಲಿ ಪ್ರತಿಪಕ್ಷ ಇರಬೇಕು. ಅವರು ಮಾತನಾಡಬೇಕು, ನಾವು ಅದಕ್ಕೆ ಉತ್ತರ ಕೊಡಬೇಕು ಎಂಬ ಒಡಂಬಡಿಕೆ ಆಗಿದೆ.

ಶ್ರೀ ಡಿ.ಎ. ಸದಾನಂದಗೌಡ : ಅಧಿಕೃತ ವಿರೋಧ ಪಕ್ಷ ನಾವಿದ್ದರೆ ಇವರಿಗೇನೂ ಸಿಕ್ಕುವುದಿಲ್ಲ ಸಾರ್, ಅದಕ್ಕೇ ನಮ್ಮನ್ನು ಹೊರಗೆ ಕಳಿಸಿದರೇನೇ ಸಂತೋಷ ಇವರಿಗೆ, ಅದಕ್ಕೆ ನಿಮ್ಮಲ್ಲಿ ಹೇಳುತ್ತಿದ್ದಾರೆ ಇವರನ್ನು ಹೊರಗೆ ಹಾಕಿ, ನಾವಿಲ್ಲಿ ಕುಳಿತು ಮಾತನಾಡುತ್ತೇವೆ ಎಂದು.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ನಿಮಗೋಸ್ಕರವೇ ಒಂದು ದಿವಸ ಮುಂದಕ್ಕೆ ಹಾಕಿಸಿ ಇವತ್ತು ಮಾತನಾಡಲು ಬಂದಿದ್ದೇವೆ. ನಿಮ್ಮ ದಯದಿಂದ ನಾವ್ಯಾರೂ ಗೆದ್ದು ಬಂದಿಲ್ಲ. ನಮ್ಮ ಜನ ನಮ್ಮ ಕ್ಷೇತ್ರಗಳಲ್ಲಿ ನಮ್ಮನ್ನು ಗೆದ್ದು ಕಳುಹಿಸಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ : ನಮ್ಮ ಮೈಮೇಲೆ ಬೀಳಬೇಡಿ ಎಂದು.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ನಿಮ್ಮ ಮೇಲೆ ಬೀಳಲಿಲ್ಲ. ನಿಮ್ಮ ದ್ವಂದ ನೀತಿಗಳನ್ನು ಈ ಮನೆಯಲ್ಲಿ ನಾವು ಹೇಳಬೇಕಾಗುತ್ತದೆ. ನಿಮ್ಮ ನೀತಿಯೇನು? ಒಂದು ಮನೆಯಲ್ಲಿ ಒಂದೊಂದು ನೀತಿ ಯಾಕೆ ಅನುಸರಿಸುತ್ತಿದ್ದೀರಿ? ಅದನ್ನು ಹೇಳುವುದೇ ತಪ್ಪು ಎಂದು ಏಕೆ ಹೇಳುತ್ತೀರಿ? ಅಲ್ಲೂ ನೀವು ಈ ತರಹ ಮಾಡಿದ್ದರೆ ಒಪ್ಪಿಕೊಳ್ಳುತ್ತಿದ್ದೆ. ಹೌದು, ಆ ಮನೆಯಲ್ಲೂ ಮಾಡುತ್ತಿದ್ದಾರೆ, ಈ ಮನೆಯಲ್ಲೂ ಮಾಡುತ್ತಾ ಇದ್ದಾರೆ, ಏಕೆಂದರೆ ಅವರು ಸರಿ ಇದ್ದಾರೆ ಎಂದು. ಆ ಮನೆಯಲ್ಲಿ ಅವರು ಪಾಲ್ಗೊಳ್ಳಬೇಕು. ಯಾಕೆಂದರೆ ಪತ್ರಿಕೆಗಳಲ್ಲಿ ನಿಮಗೆ ಪ್ರಚಾರ ಬರಲೇಬೇಕು. ಇಲ್ಲಿ ನೀವು ವಿರೋಧ ಮಾಡಬೇಕು – ಇದು ನ್ಯಾಯವಲ್ಲ. ಇವತ್ತು ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಮೂರು ವರ್ಷಗಳಿಂದ ಕಿತ್ತುತಿನ್ನುವಂತಹ ಬರ, ಬರ ಹೇಗಿದೆ ಅಂದರೆ ಅದರಲ್ಲು ರೈತನಿಗೆ ಯಾರ ಬಾಯಲ್ಲೂ ರೈತನ ಪಾದ ರಾಮಪಾದ ಅನ್ನುತ್ತಾರೆ. ಗ್ರಹಚಾರ, ರೈತನ ಮೇಲೆ ಏನೇನು ಒಳ್ಳೆಯದು ಹೇಳಬೇಕೋ ಅದನ್ನೆಲ್ಲಾ ಹೇಳುತ್ತಾರೆ. ಆದರೆ ಅವನಿಗೆ ಕಷ್ಟ ಬಂದಾಗ ಸಮರ್ಪಕವಾಗಿ ಏನು ಮಾಡಬೇಕೋ ಆ ತರಹ ಸರ್ಕಾರ ಮಾಡುತ್ತಾ ಇಲ್ಲ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕಳೆದ ಮೂರು ವರ್ಷಗಳಿಂದ ಯಾವ್ಯಾವ ರಾಜ್ಯಕ್ಕೆ ಹಣ ಎಷ್ಟು ಕೊಟ್ಟರು food grains ಎಷ್ಟು ಕೊಟ್ಟರು ಎಂಬುದನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಆಂಧ್ರದಲ್ಲಿ 2002–03, 2003–04ರಲ್ಲಿ 335.73 ಕೋಟಿ ರೂ.ಗಳನ್ನು ಕೊಟ್ಟರು. ಅದರಲ್ಲಿ NCCF ನಿಂದ 123.51 ಕೋಟಿ ರೂ.ಗಳನ್ನು ಕೊಟ್ಟರು, foodgrains 17.20 ಲಕ್ಷ ಟನ್ ಕೊಟ್ಟರು. ಚತ್ತೀಸಗಡದಲ್ಲಿ 2002–03, 2003–04ರಲ್ಲಿ 34.64 ಕೋಟಿ ರೂ.ಗಳನ್ನು ಕೊಟ್ಟರು. ಬರದಡಿ 2002–03ರಲ್ಲಿ 127.51 ಕೋಟಿ ರೂ.ಗಳನ್ನು ಕೊಟ್ಟರು. Foodgrains 4.74 ಸಾವಿರ ಟನ್ ಕೊಟ್ಟರು. ಯಾಕೆಂದರೆ ಬಿಜೆಪಿ ಸರ್ಕಾರ ಯಾವ್ಯಾವ ರಾಜ್ಯಕ್ಕೆ ಎಷ್ಟೆಷ್ಟು ಕೊಟ್ಟಿದೆ ಎಂದು ನಾನ್ಯಾಕೆ ಅದನ್ನು ಮೊದಲೇ ಹೇಳಿದೆ ಅಂದರೆ ಇದನ್ನು ಹೇಳಲಿಕ್ಕೆ ಪೀಠಿಕೆ ಯಾಕೆ ಹಾಕಬೇಕು ಅಂದರೆ ಇವರ ಪಕ್ಷಗಳಿಗೆ ಅನುಕೂಲವಿರುವಂತಹ ರಾಜ್ಯಗಳಲ್ಲಿ ಯಾವ ತರಹ ಕೊಟ್ಟಿದ್ದಾರೆ, ಅರೆ, ಇಲ್ಲಿನ ಜನ ಜನ ಅಲ್ಲವೇ? ನಮ್ಮ ರಾಜ್ಯದ ಜನ ಜನಅಲ್ಲವೇ? ಅದನ್ನು ಹೇಳಲಿಕ್ಕೆ ನಾನು ಈ figures ಹೇಳಲು ಇಚ್ಛೆಪಡುತ್ತೇನೆ. Gujrath ನಲ್ಲಿ 203.52 ಕೋಟಿ ರೂ.ಗಳನ್ನು ಕೊಟ್ಟರು 2003–04ರಲ್ಲಿ, foodgrains 3.6 ಸಾವಿರ ಟನ್ ಕೊಟ್ಟರು. ಹರ್ಯಾಣದಲ್ಲಿ 172.52 ಕೋಟಿ ರೂ.ಗಳನ್ನು ಕೊಟ್ಟರು 0.25 ಸಾವಿರ ಟನ್ foodgrains ಕೊಟ್ಟರು. ಹಿಮಾಚಲ

ಪ್ರದೇಶದಲ್ಲಿ 2003–04ರಲ್ಲಿ 54.83 ಕೋಟಿ ರೂ.ಗಳನ್ನು ಕೊಟ್ಟರು. ಅದರಲ್ಲಿ assistance provided by drought, 2002-03ರಲ್ಲಿ 14.35 ಕೋಟಿ ರೂ.ಗಳು 10 ಸಾವಿರ ಟನ್ foodgrain ಕೊಟ್ಟರು. ಜಮ್ಮು–ಕಾಶ್ಮೀರದಲ್ಲಿ 44.01 ಕೋಟಿ ರೂ. ಹಣ ಕೊಟ್ಟರು, ಅಲ್ಲಿ foodgrain ಕೊಡಲಿಲ್ಲ. ಜಾರ್ಖಂಡ್‌ನಲ್ಲಿ 71.49 ಕೋಟಿ ರೂ.ಗಳನ್ನು ಕೊಟ್ಟರು, ಅದರಲ್ಲಿ 40; ಸಾವಿರ ಟನ್ foodgrains ಕೊಟ್ಟರು, ನಮ್ಮ ಸದಸ್ಯರು ಇದನ್ನು ಕೇಳಬೇಕು ಕರ್ನಾಟಕದಲ್ಲಿ 2003–04 ರಲ್ಲಿ 126.40 ಕೋಟಿ ರೂ.ಗಳನ್ನು ಕೊಟ್ಟರು. 2002–03ರಲ್ಲಿ 207.65 ಕೋಟಿ ರೂ.ಗಳನ್ನು ಕೊಟ್ಟರು. foodgrain 7.20 ಸಾವಿರ ಟನ್ ಕೊಟ್ಟರು, 2003–04ರಲ್ಲಿ 115.84 ಕೋಟಿ ರೂ. ಹಣ ಕೊಟ್ಟಿದ್ದಾರೆ. 3.30 ಸಾವಿರ ಟನ್ foodgrains ಕೊಟ್ಟಿದ್ದಾರೆ. ಕೇರಳದಲ್ಲಿ 113.98 ಕೋಟಿ ರೂ.ಗಳನ್ನು ಕೊಟ್ಟರು. foodgrains 52,000 tonne ಕೊಟ್ಟರು. ಮಧ್ಯಪ್ರದೇಶದಲ್ಲಿ 107.17 ಕೋಟಿ ರೂ.ಗಳನ್ನು ಕೊಟ್ಟರು, ಅದರಲ್ಲಿ 2002–03ರಲ್ಲಿ 171.66 ಕೋಟಿ ರೂ.ಗಳನ್ನು ಕೊಟ್ಟರು, Foodgrains 7.80 ಲಕ್ಷ ಟನ್ ಕೊಟ್ಟರು. ಮಹಾರಾಷ್ಟ್ರದಲ್ಲಿ 266.48 ಕೋಟಿ ರೂ.ಗಳನ್ನು ಕೊಟ್ಟರು. 2002–03ರಲ್ಲಿ 2.32 ಲಕ್ಷ ಟನ್ foodgrains ಕೊಟ್ಟರು. ಒರಿಸ್ಸಾನಲ್ಲಿ, 185.56 ಕೋಟಿ ರೂ.ಗಳನ್ನು ಕೊಟ್ಟರು. foodgrains 4.22 lakh tonne ಕೊಟ್ಟರು. ಪಂಜಾಬ್‌ನಲ್ಲಿ 101.47 ಕೋಟಿ ರೂ.ಗಳನ್ನು ಕೊಟ್ಟರು, ಅಲ್ಲಿ foodgrains ಕೊಡಲ್ಲಿಲ್ಲ. ರಾಜಾಸ್ತಾನ್‌ದಲ್ಲಿ 350.88 ಕೋಟಿ ರೂ. ಹಣ ಕೊಟ್ಟರು. 2002–03ರಲ್ಲಿ 889.61 ಕೋಟಿ ರೂ.ಗಳನ್ನು ಕೊಟ್ಟರು, 32.05 ಲಕ್ಷ ಟನ್ ಆಹಾರ ಕೊಟ್ಟರು. ತಮಿಳುನಾಡಿನಲ್ಲಿ 129.42 ಕೋಟಿ ರೂ. ಹಣ ಕೊಟ್ಟರು. 2002–03ರಲ್ಲಿ 332.09 ಕೋಟಿ ರೂ.ಗಳನ್ನು ಕೊಟ್ಟರು. foodgrains 5 ಲಕ್ಷ ಟನ್ ಕೊಟ್ಟರು. ಉತ್ತರಾಂಚಲದಲ್ಲಿ 40.81 ಕೋಟಿ ರೂ ಹಣ ಕೊಟ್ಟರು. 2002–03ರಲ್ಲಿ 310.06 ಕೋಟಿ ರೂ.ಗಳನ್ನು ಕೊಟ್ಟರು 50 ಸಾವಿರ ಟನ್ foodgrains ಕೊಟ್ಟರು, ಉತ್ತರ ಪ್ರದೇಶದಲ್ಲಿ 184.45 ಕೋಟಿ ರೂ.ಹಣ ಕೊಟ್ಟರು, ಆಹಾರ ಎರಡು ಲಕ್ಷ ಟನ್ ಕೊಟ್ಟರು, ಸ್ವಾಮಿ, ಈ ಸಾರಿ ಆಂಧ್ರಕ್ಕೆ 101 ಲಕ್ಷ ಟನ್ ಕೊಟ್ಟಿದ್ದಾರೆ. ನಮಗೆ 3.30 ಲಕ್ಷ ಟನ್ ಕೊಟ್ಟಿದ್ದಾರೆ, 115.15 ಕೋಟಿ ರೂ.ಹಣ ಕೊಟ್ಟಿದ್ದಾರೆ. ಇದನ್ನು ಏಕೆ ಹೇಳಿದೆ ಅಂದರೆ, ಯಾವ ರಾಜ್ಯದಲ್ಲಿ ಬಿಜೆಪಿ ಸರ್ಕಾರಕ್ಕೆ ಅಥವಾ ಆ ಸರ್ಕಾರದೊಡನೆ ಒಡಂಬಡಿಕೆಯಾಗಿರುವ ಸರ್ಕಾರವಿದ್ದರೆ ಆಹಾರಧಾನ್ಯ ಹಣವನ್ನು ಹೇರಳವಾಗಿ ಕೊಟ್ಟರು. ನಮ್ಮಂತಹ ರಾಜ್ಯಗಳಲ್ಲಿ ಯಾರೋ ಮತ ಹಾಕಲಿಲ್ಲ ಎಂಬ ಒಂದೇ ಒಂದು ಕೋಪಕ್ಕೆ ಇವರು ನಮಗೆ ಕಡಿಮೆ ಕೊಟ್ಟರು. ಇದೇನು ಸ್ವಾಮಿ? ನಾವೇನು ಕರ್ನಾಟಕದವರು ಪಾಕಿಸ್ತಾನದಿಂದ ಬಂದಿದ್ದೇವೆಯೇ? ಅಥವಾ ಚೈನಾ ದೇಶದಿಂದ ಬಂದಿದ್ದೇವೆಯೇ? ಇದನ್ನು ಅರ್ಥ ಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರ ನೂರು ಚಿಲ್ಲರೆ ಕೋಟಿ ಜನಸಂಖ್ಯೆ ಈ ದೇಶದಲ್ಲೇನಿದೆ ಎಲ್ಲರೂ ಒಂದು, ಚುನಾವಣೆ ಪ್ರಜಾತಂತ್ರದಲ್ಲಿ ಬರುತ್ತದೆ ಹೋಗುತ್ತದೆ ಗೆಲ್ಲಬಹುದು ಸೋಲಬಹುದು ಆದರೆ -ಚುನಾವಣೆಯಲ್ಲಿ ಬಿಜೆಪಿಗೆ ಮತ ಹಾಕಲಿಲ್ಲ ಎಂಬ ಒಂದೇ ಕಾರಣಕ್ಕೆ ನಮ್ಮ ರಾಜ್ಯವನ್ನು ಇಷ್ಟು ಕೀಳ್ಮಟ್ಟದಲ್ಲಿ ನೋಡಿದಂತಹ ಕೇಂದ್ರ ಸರ್ಕಾರಕ್ಕೆ ಇಡೀ ರಾಜ್ಯ ಶಾಪ ಹಾಕಬೇಕು ಎಂಬುದು ನನ್ನ ಅನಿಸಿಕೆ. ಈ ಅಂಕಿಗಳನ್ನು ನೋಡಿದಾಗ ಎಷ್ಟು ನೋವಾಗುತ್ತದೆ. ಇವತ್ತು ಕೇಂದ್ರ ಸರ್ಕಾರದವರು ಬರದಲ್ಲೂ ರಾಜಕಾರಣ ಮಾಡಲು ಹೊರಟಿದ್ದಾರೆ. ಇದು ಮಹಾತಪ್ಪು ಎಂದು ನಾನು ಮೊದಲನೆಯದಾಗಿ ಹೇಳುತ್ತಾ, ಬರದಲ್ಲಿ ನಮ್ಮ ರಾಜ್ಯ ಸರ್ಕಾರ ಕೂಡ ಏನು ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ. ನಮ್ಮ ಸರ್ಕಾರಗಳಿದ್ದಾಗ ದಿವಂಗತ ಶ್ರೀ ರಾಮಕೃಷ್ಣ

ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಈ ರಾಜ್ಯದಲ್ಲಿ ಅಕ್ಯೂಟ್ ಬರ ಬಂದಿತ್ತು. ಅವತ್ತು ಮಾಡಿದ ಗೋಶಾಲೆಗಳಿರಬಹುದು, ಗಂಜಿ ಕೇಂದ್ರಗಳಿರಬಹುದು. ಇವತ್ತು ಅವುಗಳನ್ನು ನೆನೆಸಿಕೊಂಡು ಮೆಲುಕು ಹಾಕಬೇಕೇ ವಿನಹ ನೀವ್ಯಾರೂ ಕೂಡ ಒಂದನ್ನೂ ಸರಿಯಾಗಿ ಅನುಷ್ಠಾನಕ್ಕೆ ತರಲಿಲ್ಲ. ಕೋಲಾರದಲ್ಲಿ ನಾನು ನಮ್ಮ ಸಂಸ್ಥೆ IFFCO ನಿಂದ ಹಣವನ್ನು ಕೊಟ್ಟು ನಾವು ಗೋಶಾಲೆಗಳನ್ನು ಮಾಡಿ ಎಂದು ಹೇಳಿದರೆ ಮೂರೇ ದಿನದಲ್ಲಿ ಕ್ಲೋಸ್ ಮಾಡಿಬಿಟ್ಟರು. 40 ಲಕ್ಷ ರೂಪಾಯಿ ಹಣವನ್ನು ನಾವು ನಮ್ಮ ಸಂಸ್ಥೆಯಿಂದ ಕೊಟ್ಟೆವು. ಅದೇನು ಮಾಡಿದ್ದಾರೆಂದು ಇನ್ನು ಲೆಕ್ಕವನ್ನೂ ಕೊಟ್ಟಿಲ್ಲ. ನಾನು ಜಿಲ್ಲಾಧಿಕಾರಿಗಳಿಗೆ ಹೇಳಿದೆ, ಲೆಕ್ಕ ಕೊಡಿ, ಎಷ್ಟು ಹಣ ಉಳಿದಿದೆ, ಏನು ಖರ್ಚಾಗಿದೆ ಎಂದು ನೋಡೋಣ ಎಂದು ಹೇಳಿದೆ. ನೀವು ಯಾವ ರೀತಿ ಬರವನ್ನು tackle ಮಾಡಬೇಕಾಗಿತ್ತೋ ಆ ರೀತಿ tackle ಮಾಡಲಿಲ್ಲ. ಈ ರಾಜ್ಯದಲ್ಲಿ ಅನೇಕ ದನಕರುಗಳು ಸತ್ತವು. ನಿಮಗ್ಯಾರಿಗೂ ಆ ಚಿಂತನೆಯೇ ಇಲ್ಲ. ಸರ್ಕಾರದ ಚಿಂತನೆ ಈ ಜನತಾ ದಳದವರು ಹೊಡೆದಾಡುತ್ತಾರೋ, ಬಿಜೆಪಿಯವರು ಹೊಡೆದಾಡುತ್ತಾರೋ ಇನ್ನೊಂದು ಏನು ಆಗುತ್ತದೋ, ಬರೀ ರಾಜಕಾರಣ ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟೇ ವಿನಹ ನೀವು ಬರವನ್ನು ಸಮರ್ಪಕವಾಗಿ ಎದುರಿಸಲಿಲ್ಲ ಎನ್ನುವ ಮಾತನ್ನು ನಾನು ನೇರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಏನು ಸಮಸ್ಯೆ ಬಂದಿದೆ ಎಂಬುದು ತಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಕೋಲಾರ ಜಿಲ್ಲೆಗೆ ಬೋರ್‌ವೆಲ್ಲೇ ಹಾಕಬಾರದು ಎಂದು ಒಂದು ಸರ್ಕ್ಯುಲರ್ ಬಂದಿದೆ. ಪಟ್ಟಣಗಳಲ್ಲಿ ಆದರೆ ಟ್ರಾಕ್ಟರ್‌ಗಳಲ್ಲಿ ತೆಗೆದುಕೊಂಡು ಹೋಗಿ ನೀವು ನೀರನ್ನು ಕೊಡಬಹುದು. ನಾನೇನು ಇಲ್ಲವೆಂದು ಹೇಳಲಿಲ್ಲ. ಹಳ್ಳಿಗಳಲ್ಲಿ ಟ್ಯಾಂಕರ್‌ಗಳಲ್ಲಿ ಎಷ್ಟು ಕೊಡುವುದಕ್ಕೆ ಸಾಧ್ಯ? ಕುರಿಗಳಿಗೆ, ಮೇಕೆಗಳಿಗೆ ನೀರು ಕೊಡಬೇಕು, ದನಗಳಿಗೆ, ಎಮ್ಮೆಗಳಿಗೆ ನೀರನ್ನು ಕೊಡಬೇಕು, ನಮ್ಮಲ್ಲಿ ಸೀಮೆ ಹಸುಗಳಿವೆ. ಒಂದು ದಿವಸ ಅವುಗಳ ಮೈ ತೊಳೆಯದಿದ್ದರೆ ಎರಡನೇ ದಿವಸ ಅದು ಸರಿಯಾಗಿ ಹಾಲನ್ನೇ ಕೊಡುವುದಿಲ್ಲ. ಅವುಗಳಿಗೆ ಸರಿಯಾಗಿ ಆರೈಕೆ ಮಾಡಬೇಕು. ಇಂಥದ್ದರಲ್ಲಿ ಬೋರ್‌ವೆಲ್‌ನ್ನು ಹಾಕಬಾರದೆಂದು ಹೇಳಿ ಒಬ್ಬ ಅಧಿಕಾರಿ ಸರ್ಕ್ಯುಲರನ್ನು ಕೊಟ್ಟಿದ್ದಾರೆ. ನಮ್ಮ ಕಂದಾಯ ಮಂತ್ರಿಗಳು ಹಾಸನದಲ್ಲಿ ಬರ ಇಲ್ಲವೆಂದು ಹೇಳಿ ಅವರಿಗೆ ಬರದ ಸಮಸ್ಯೆ ಬಗ್ಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಇತ್ತೀಚೆಗೆ ಒಂದು ಸರ್ಕ್ಯುಲರ್ ಬಂತು. ಬೋರ್‌ವೆಲ್ ಹಾಕಬೇಕೆಂದು ನಾವು ಜಿಲ್ಲಾಧಿಕಾರಿಗಳನ್ನು ಕೇಳಿದರೆ ಇಲ್ಲ. ಬೋರ್‌ವೆಲ್ ಹಾಕುವುದಕ್ಕಾಗುವುದಿಲ್ಲ ಅನ್ನುತ್ತಾರೆ. ನಾನು ಕೋಲಾರ ಜಿಲ್ಲೆ ಬಗ್ಗೆ ಹೇಳುತ್ತಿದ್ದೇನೆ. ನೀವೇನು ಕುಡಿಯುವ ನೀರನ್ನೇ ಕೊಡಬಾರದೆಂದು ಯೋಚನೆಯನ್ನು ಮಾಡಿದ್ದೀರಾ? ಚುನಾವಣೆಗಳು ಏನೋ ಬರುತ್ತವೆ. ಆ ಚುನಾವಣೆಗಳನ್ನು ಒಂದು ಕಡೆ ಇಡೋಣ. ಆದರೆ ಕುಡಿಯುವ ನೀರು ಕೊಡದಿದ್ದರೆ ಆ ಪರಿಸ್ಥಿತಿ ಬಂದರೆ ಜನಗಳ ಗತಿಯೇನು? ನಾನೇ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ 29.10.2003ರಲ್ಲಿ ಸ್ವತಃ ಹೋಗಿ ಈ ತರಹ ಪರಿಸ್ಥಿತಿ ಇದೆಯೆಂದು ಹೇಳಿದೆ, ಕುಡಿಯುವ ನೀರಿನ ಬಗ್ಗೆ ಏನಾದರೂ ಮಾಡಿ ಎಂದು ಕೇಳಿದೆ. ಇಲ್ಲ, ಕುಡಿಯುವ ನೀರಿಗೆ ಏನೂ ತೊಂದರೆ ಇಲ್ಲ. ನೀವ್ಯಾಕೆ ಯೋಚನೆಯನ್ನು ಮಾಡುತ್ತೀರಿ ಎಂದು ಹೇಳಿ ಮಾನ್ಯ ಕೋಳಿವಾಡ್‌ರವರಿಗೆ ಒಂದು ಪತ್ರವನ್ನು ಬರೆದರು. ಅದನ್ನು ಬೇಕಾದರೆ ಮಾನ್ಯ ಮಂತ್ರಿಗಳಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ. "ಕುಡಿಯುವ ನೀರಿನ ವಿಚಾರ–ತತ್‌ಕ್ಷಣ